ಹಾಗೆ ಬಿದ್ದು ಸಾಯ್ತೀಯಲ್ಲೋ' ಎಂದು ಪುರುವಿನೆದುರೆ ಶೇಖರನನ್ನು ಜರೆಯುತ್ತ ಕೈವರೆಸಿದ ಸೆರಗಂಚಿಗೇ ಮೂಗನ್ನೂ ಹಿಂಡಿಕೊಂಡು ಕಣ್ಣೆರಿಡುತ್ತಿದ್ದಳು.

ಅಲ್ಲಿಯೇ ಇದ್ದ ಪುರು ಮಾಮಿಯನ್ನು ಸಂತೈಸುತ್ತ, 'ಮಾಮಿ ಚಿಂತೆ ಮಾಡ್ಬೇಡಾ. ಶೇಖರ ಚೊಲೋ ವ್ಯಾಪಾರ ಕಲಿತು, ಬೆಂಗ್ಳೂರಿಗೆ ಹೋಗಿ ಅಲ್ಲಿ ದೊಡ್ಡ ಹೋಟೆಲ್ ಇಡ್ತಾನೆ ನೋಡ್ತಿರು. ಅಲ್ಲಿ ನಾನು ಕ್ಯಾಷಿಯರಾಗಿ ಸೇರಿಕೊಳ್ತೇನೆ' ಎಂದು ಹೇಳುತ್ತ ಮಾಮಿ ಮಾಡಿದ ತಿಂಡಿಯೇನಿದೆ ಎಂದು ಡಬ್ಬ ಹುಡುಕುತ್ತಿದ್ದ.

ತಾಯಂದಿರ ಗಲಾಟೆಗಾಗಲಿ, ಕಣ್ಣೀರಿಗಾಗಲಿ ತೀರಾ ತಲೆಕೆಡಿಸಿಕೊಳ್ಳದೆ ಕುಡ್ತಗಿ ಬೈಲಿನಲ್ಲಿ ರಸ್ತೆಯ ಎರಡೂ ಬದಿಗೆ ನಿಂತೇ ಇರುತ್ತಿದ್ದ ಉಪ್ಪು ನೀರಿನ ವಾಸನೆ ಹೀರಿಕೊಳ್ಳುತ್ತ ಓಡಾಡಿ ಬರುತ್ತಿದ್ದರು. ಆದರೂ ಶೇಖರನ ತಾಯಿಯ ಬಳಿ ತಾನಾಡಿದ ಮಾತು ನಾಲಿಗೆ ತುದಿಯಿಂದ ಬಂದಿದ್ದೋ, ಮನಸ್ಸಿನಾಳದಿಂದಲೋ ಎಂಬುದು ಖುದ್ದು ಪುರುವಿಗೂ ಗೊತ್ತಿರಲಿಲ್ಲ.

ಶೇಖರನನ್ನು ಅಷ್ಟಾಗಿ ಹಚ್ಚಿಕೊಂಡಿದ್ದ ಪುರು ಮಾತ್ರ ಶೀತು ಸವರಿಟ್ಟ ಎಣ್ಣೆ ಮೇಲೆ ಕಾಲಿಟ್ಟಾಗಿತ್ತು ಎನ್ನುವುದು ಪುರು ಜಾರಿಬಿದ್ದಾಗಲೇ ಅರಿವಿಗೆ ಬಂದಿದ್ದು. ದತ್ತ ನಾಯ್ಕ ಪುರುವಿನೆದುರು ಶೇಖರನನ್ನು ಬಾಯ್ತುಂಬಾ, 'ಬಹಳ ಎತ್ತರಕ್ಕೆ ಏರ್ತಿ ನೀನು! ಒಳ್ಳೆ ದುಡಿತವಾನ್ ಇದ್ದೀಯಪ್ಪಾ. ಪುರುವಿನ ಜೊತೆ ನೀನೂ ನನ್ನ ಮಗನಾಗಿ ಹುಟ್ಟಿದ್ದರೆ ನನ್ ವಹಿವಾಟನ್ನೆಲ್ಲಾ ನಿನಗೇ ವಹಿಸಿಕೊಡುತ್ತಿದ್ದೆ. ನಿನ್ನ ಕಡುಗಪ್ಪು ಕಣ್ಣು ಇದೆಯಲ್ಲಾ ಅದೇ ನಿನ್ನ ಪ್ರಾಮಾಣಿಕತೆಯನ್ನು ವತ್ತಿ ವತ್ತಿ ತಿಳಿಸ್ತದೆ' ಅಂತ ಪುರುವಿನೆದುರು ಬಾಯಿಗೆ ಬಂದ ಹಾಗೆ ಶೇಖರನನ್ನು ಹೊಗಳಿದಾಗ ಪುರುವಿನಲ್ಲೇನೋ ತಳಮಳ. ಶೀತುವಿಗಿತ್ತಲ್ಲ ಗಂಟಲಲ್ಲಿ ಸಿಕ್ಕಿಕೊಂಡ ಕಫ, ಅದೇ! ಅತ್ತಲಾಗಿ ಅವರೆದುರು ನುಂಗಲಾರ, ಕ್ಯಾಕರಿಸಿ ಉಗಿಯಲಾರದ ಪರಿಸ್ಥಿತಿ. ಹೋಟೆಲು ಬಾಗಿಲಿನಲ್ಲಿ ತನ್ನಪ್ಪ ಶೇಖರನನ್ನು ನಾಲ್ಕು ಜನರೆದುರು ತನ್ನ ಉಪಸ್ಥಿತಿಯಲ್ಲಿ ಹೊಗಳುವುದು ಪುರುವಿಗೆ ಮುಖ ಕಟ್ಟುತ್ತಿತ್ತು. ಶೇಖರ ಪುರುವಿನ ಜೀವದ ಗೆಳೆಯನಾದರೂ ಮಾತ್ಸರ್ಯವೆನ್ನುವುದು ಹೇಳಿಕೇಳಿ ಬರುವುದಲ್ಲ. ಸದ್ದಿಲ್ಲದೆ, ಒಳಗೊಳಗೇ ಬೇಡವೆಂದರೂ ಹುಟ್ಟುವಂಥದ್ದು ಮತ್ತು ಬೆಳೆಯುವಂಥದ್ದು!

ಆವತ್ತು ಚೌತಿ ಹಬ್ಬ. ಶೇಖರನ ಮನೆಯಲ್ಲಿ ಚೌತಿ ಹಬ್ಬದ ಸಂಭ್ರಮವೆಂದರೆ ಕೇಳಬೇಕಾ? ಗಣಪನನ್ನು ಕರೆಸಿ, ಇಪ್ಪತ್ತೊಂದು ನಮೂನೆಯ ಕಜ್ಜಾಯ ಮಾಡಿ ನೈವೇದ್ಯಕ್ಕಿಟ್ಟು, ವಾಯ್ನ ಕೊಟ್ಟು ಒಂದು ವಾರದ ನಂತರ ವಿಸರ್ಜನೆ ಮಾಡುತ್ತಿದ್ದರು. ಪ್ರತಿದಿನ ಕಜ್ಜಾಯ, ಬೆಳಿಗ್ಗೆ ಮತ್ತು ಮೂರ್ಸಂಜೆಗೊಂದು ಮಂಗಳಾರತಿ, ಬಂದವರಿಗೆಲ್ಲಾ ಭರಪೂರ್ ಪ್ರಸಾದ ಸೇವೆ ನಡೆಯುತ್ತಿತ್ತು. ಶೇಖರನ ಮನೆಯ ಚೌತಿ ಹಬ್ಬದಲ್ಲಿ ಸಡಗರಪಡುವುದನು ನೋಡಿದರೆ ಪುರುವಿನ ಮನೆಯದೇ ಹಬ್ಬ ಎನ್ನಿಸುತ್ತಿತ್ತು. 'ಮಾಮಿ, ನೀವು ಕೂತ್ಕೊಳ್ಳಿ. ತೀರ್ಥ ಪ್ರಸಾದ ನಾನು ಕೊಡ್ತೇನೆ' ಎಂದು ಪುರುವೇ ಮುಂದಿರುತ್ತಿದ್ದ.

ಪ್ರತಿಸಲದಂತೆ ಆ ಸಲವೂ ಏಳನೇ ದಿನದ ಪೂಜೆ ಮುಗಿಸಿ, ವಿಸರ್ಜನೆ ಮಾಡಿ ಗಣಪತಿಯನ್ನು ಮುಳುಗಿಸಲು ಕಾಯುತ್ತಿದ್ದರು. ಆರ್ಭಟದ ಮಳೆ ಹೊಳುವನ್ನು ಕೊಡುತ್ತಲೇ ಇರಲಿಲ್ಲ. ಕಾದು ಕಾದು ಇನ್ನು ಸಂಜೆಯಾಗುತ್ತ ಬಂದಿತ್ತು. ಆರ್ಭಟದ ಮಳೆ ನಿಂತು ಸಣ್ಣಕ್ಕೆ ಜಿಮುರ ತೊಡಗಿತು. ಇಷ್ಟಾದರೂ ಹೊಳವು ಸಿಕ್ಕಿತಲ್ಲ ಎಂದು ಭಾವಿಸಿ ಗಣಪನನ್ನು ಹೊತ್ತು, ಜಮಟೆ ಬಡಿಯುತ್ತ ವನ್ನಳ್ಳಿ ಬೇಲೆಗೆ ಮುಳುಗಿಸಲು ಹೊರಟರು.

ಮಾಮಿಯ ಹಾಲೇ ಕಾಣದ ಚಹದ ಬಣ್ಣದ ಅರಲು ನೀರಿನಲ್ಲೇ ನಡೆಯುತ್ತ ಗಣಪತಿ ವಿಸರ್ಜನೆಯ ಗುಂಪು ಹೊರಟಿತ್ತು. ಶೇಖರನೇ ಗಣಪತಿಯನ್ನು ಹೊತ್ತಿದ್ದ. ಪ್ರತಿಸಲ ಗಣಪತಿ